ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ
ಚನ್ನಪಟ್ಟಣ

CC No.263 /2018

CW -1 PW - 1

| | | |
|---|---|---|
| ಹೆಸರು | : | ಪುಟ್ಟರಾಜು |
| ಗಂಡನ / ತಂದೆಯ ಹೆಸರು | : | ಜಯರಾಮು |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಕೂಲಿ |
| ವಾಸ | : | ಅಕ್ಕೂರು ಹೊಸಹಳ್ಳಿ ದೊಡ್ಡಿ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ಯವರಿಂದ : ದಿನಾಂಕ 08.11.2019

ಚಾಸಾ2 ಗೊತ್ತು. ಆರೋಪಿ ಗೊತ್ತು. ಸುಮಾರು 2 ವರೆ ವರ್ಷಗಳ ಹಿಂದೆ ಮದ್ಯಾಹ್ನ 1.00-1.30 ಗಂಟೆಯ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಆರೋಪಿ ಹಳೆಯ ದ್ವೇಷದಿಂದ ಆರೋಪಿ ಕುಡಿದು ಬಂದು ದೊಣ್ಣೆದುಂದ ನನ್ನ ತಲೆಯಹಿಂಭಾಗಕ್ಕೆ ಹೊಡೆದಿರುತ್ತಾನೆ. ನನಗೆ ಜ್ಞಾನ ತಪ್ಪಿ ಬಿದ್ದಿದೆ. ನನ್ನನ್ನು ಅಂಬ್ಯುಲೆನ್ಸ್ ನಲ್ಲಿ ಆಸ್ಪತ್ರೆಗೆ ಪೋಲಿಸ್ ನವರು ಕರೆದುಕೊಂಡು ಹೋಗಿರುತ್ತಾರೆ. ನಾನು ಆಸ್ಪತ್ರೆಯಲ್ಲಿ ಪೋಲಿಸರಿಗೆ ನಿಪಿ-1 ರಂತೆ ಹೇಳಿಕೆಯನ್ನು ನೀಡಿರುತ್ತೇನೆ. ನನ್ನ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಆರೋಪಿ ನನಗೆ ಹೊಡೆಯಲು ಉಪಯೋಗಿಸಿದ

ದೊಣ್ಣೆಯು ಈಗ ನ್ಯಾಯಾಲಯದ ಮುಂದೆ ಇದ್ದು ಅದನ್ನು ಮು ಮಾ 1 ಎಂದು ಗುರುತಿಸಲಾಯಿತು. ಆರೋಪಿ ನ್ಯಾಯಾಲಯದ ಮುಂದೆ ಇರುತ್ತಾನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಅನುಮತಿಸಲಾಯಿತು).

ಪಾಟೀ ಸವಾಲು ಃ ಎಪಿಪಿ ಯವರಿಂದ ಃ

ಆರೋಪಿ ಕೈಯಿಂದ ಹೊಡೆದು ಕಾಲುಗಳಿಂದ ತುಳಿದಿರುತ್ತಾನೆ ಎಂದರೆ ಸರಿ. ಆರೋಪಿ ಅವಾಚ್ಯ ಶಬ್ದದಿಂದ ಬೈದು ಪ್ರಾಣ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿ.

ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಚ್ ಹೆ ವಕೀಲರಿಂದಃ

ಆರೋಪಿ ನನ್ನ ಭಾಮೈದ . ಚಾಸಾ2 ನನ್ನ ಅಣ್ಣ.  ನನ್ನ ಮನೆಯ ಡೋರ್ ನಂಬರ್ ನನಗೆ ಗೊತ್ತಿಲ್ಲ. ಸದರಿ ಮನೆ ನನ್ನ ತಾಯಿಯ ಹೆಸರಿನಲ್ಲಿದೆ. ಸದರಿ ಮನೆ ನನಗೆ ಸೇರಿದೆ ಎಂದು ತೋರಿಸಲು ನಾನು ಪೋಲಿಸರಿಗೆ ದಾಖಲೆಯನ್ನು ಕೊಟ್ಟಿರುತ್ತೇನೆ. ಘಟನೆ ಯಾಗುವ ಸಂದರ್ಬದಲ್ಲಿ ನಮ್ಮ ಮನೆಯ ಮುಂದೆ ನೀರು ಹೋಗಲು ಯಾವುದೇ

ಮೋರಿ ಇರಲಿಲ್ಲ. ಘಟನೆಯಾಗುವ ಸಂದರ್ಬದಲ್ಲಿ ನಮ್ಮ ಮನೆಯ ಮುಂದೆ ನೀರು ನಿಂತಿರಲಿಲ್ಲ. ನಮ್ಮ ಮನೆಯ ಅಕ್ಕಪಕ್ಕದಲ್ಲಿ ಸುಮಾರು ಮನೆಗಳು ಇವೆ ಎಂದರೆ ಸರಿ. ಘಟನೆಯಾಗುವ ಸಂದರ್ಬದಲ್ಲಿ ಆರೋಪಿಯನ್ನು ಬಿಟ್ಟು ಬೇರೆಯಾರು ಸ್ಥಳದಲ್ಲಿ ಇರಲಿಲ್ಲ ಅಲ್ಲಿ ಯಾರು ಜನ ಸೇರಿರಲಿಲ್ಲ. ನನಗೆ ಏಟು ಬಿದ್ದಾಗ ನನ್ನ ಬಟ್ಟೆಗೆ ರಕ್ತತಾಗಿತ್ತು. ಸದರಿ ರಕ್ತತಾಗಿದ ಬಟ್ಟೆಯನ್ನು ಪೋಲಿಸರಿಗೆ ಕೊಟ್ಟಿರುತ್ತೇನೆ. ಘಟನಾ ಸ್ಥಳದಿಂದ ಪೋಲಿಸ್ ಠಾಣೆಗೆ 5 ನಿಮಿಷದ ಅಂತರ ಇದೆ. ನಾನು ಆಸ್ಪತ್ರೆಗೆ ಹೋಗುವ ಮುನ್ನ ನಾನು ಠಾಣೆಗೆ ಹೋಗಿದ್ದೆ. ನಾನು ಆಸ್ಪತ್ರೆಗೆ ಹೋದಾಗ ಪೋಲಿಸರು ದೂರನ್ನು ಪಡೆದುಕೊಂಡಿಲ್ಲ. ನಾನು ಪೋಲಿಸ್ ಠಾಣೆಗೆ ಹೋಗುವ ಸಂದರ್ಬದಲ್ಲಿ ನನಗೆ ಪ್ರಜ್ಞೆ ಇರಲಿಲ್ಲ.

ನಾನು ಆಸ್ಪತ್ರೆಯಲ್ಲಿದ್ದಾಗ ಘಟನೆಯಾದ ಮಾರನೇ ದಿನ ಪೋಲಿಸರು ಆಸ್ಪತ್ರೆಗೆ ಬಂದರು. ಘಟನೆಯಾದ ದಿನ ರಾತ್ರಿ ನನಗೆ ಪ್ರಜ್ಞೆ ಬಂದಿತ್ತು. ಪೋಲಿಸರು ನನ್ನ ಹೇಳಿಕೆಯನ್ನು ಬರೆದಿದ್ದು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಹಿಂದಿನಿಂದ ವೈಮನಸ್ಸು ಇದೆ ಎಂದರೆ ಸರಿ. ಆಗಾಗ ನನ್ನ ಮತ್ತು ಅರೋಪಿಯ ನಡುವ ಮಾತುಕತೆ ನಡೆಯುತ್ತದೆ ಎಂದರೆ ಸರಿ. ನನಗೆ ಕುಡಿಯುವ ಅಬ್ಯಾಸ ಇದೆ. ನಾನು ಕುಡಿದು ಬಂದು ಜಾರಿ ಬಿದ್ದು ಗಾಯಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಆಗಿದ್ದ ಗಾಯವನ್ನು ದುರುಪಯೋಗ ಪಡಿಸಿ ನನಗೂ ಆರೋಪಿಗೂ ಆಗದೆ

ಇದ್ದ ಕಾರಣ ನಾನು ಆರೋಪಿಯ ವಿರುದ್ದ ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಮು ಮಾ 1 ನ್ನು ನಾನು ಪೋಲಿಸರಿಗೆ ಕೊಟ್ಟಿಲ್ಲ. ಮು ಮಾ 1 ರಂತಹ ದೊಣ್ಣೆಗಳು ಸಾಮಾನ್ಯವಾಗಿ ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿ. ಆರೋಪಿಗೂ ನನಗೂ ಆಗದೆ ಇದ್ದ ಕಾರಣ ಕೇಸನ್ನು ಬಲಪಡಿಸಲು ಮು ಮಾ 1 ನ್ನು ನಾನೇ ಪೋಲಿಸರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಬೇರೆ ಸಾಕ್ಷಿಗಳು ನನಗೆ ಗಾಯವಾದ ಬಂದಿದ್ದರು ಎಂದರೆ ಸರಿ. ನನಗೂ ಮತ್ತು ಆರೋಪಿಗೂ ಆಗದೆ ಇದ್ದ ಕಾರಣ ಆರೋಪಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ : ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಚನ್ನಪಟ್ಟಣ